ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸರ್ಕಾರಕ್ಕೆ ಬೆಂಬಲ ಕೊಡುವ ಉದ್ದೇಶದಿಂದ ನಡೆಸಿದ ಚಳುವಳಿ ಇದು ಎಂದು ಮಾನ್ಯ ಸದಸ್ಯರು ಹೇಳಿದರು. ಹಾಗಿದ್ದರೆ ಈ ಚಳುವಳಿಗೆ ಸರ್ಕಾರದ ಪೂರ್ಣ ಬೆಂಬಲವಿದೆ ಎಂದು ತಿಳಿದುಕೊಳ್ಳೋಣವೇ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಆ ರೀತಿಯಿಂದ ಅಭಿಪ್ರಾಯ ಪಟ್ಟಿದ್ದಾರೆ, ನಾವು ಚಳುವಳಿಗೆ ಬೆಂಬಲ ಕೊಟ್ಟಿದ್ದೇವೆ ಅಂತ ಅಲ್ಲ.

ಶ್ರೀ ಬಿ. ಪಿ. ಗಂಗಾಧರ್.—ಆ ದಿವಸ ಪ್ರೊಸೆಷನ್ ಪ್ರಾರಂಭವಾದದ್ದೇ ನನಗೆ ಗೊತ್ತಿದ್ದ ಮುಟ್ಟಿಗೆ ಮೈಸೂರು ಬ್ಯಾಂಕಿನ ಚೌಕದಿಂದ. ಅವರನ್ನು ಆಗಲೇ ಅಲ್ಲೇ ಅರೆಸ್ಟ್ ಮಾಡಿದರೇ? ಅವರ ಮೇಲೆ ದೂರು ಯಾವತ್ತು ಬಂತು ?

ಶ್ರೀ ವೀರೇಂದ್ರ ಪಾಟೀಲ್.—10ನೇ ತಾರೀಖು ಅರ್ಲಿ ಮಾರ್ನಿಂಗ್ 1-10 ಎ. ಎಂ. ಮಾರನೇ ದಿವಸ ಕ್ರಮ ತೆಗೆದುಕೊಂಡಿದ್ದಾರೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಮೈಸೂರು ಬ್ಯಾಂಕಿನ ಚೌಕದಲ್ಲಿ ಸಾವಿರಾರು ಜನ ಸೇರಿದ್ದರು, ಅಂತಹ ಸಂದರ್ಭದಲ್ಲಿ ಪೋಲೀಸನವರು ಹೋಗಿ ಅವರಿಬ್ಬರನ್ನು ಅರೆಸ್ಟ್ ಮಾಡಿದರು. ಆಗ ಗದ್ದಲ, ಗಲಭೆ ಗೊಂದಲವಾಯಿತು ಇದಕ್ಕೆ ಪೋಲೀಸ್‌ನವರು ಕಾರಣರಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಚಳುವಳಿ ಮಾಡುವ ಹೆನರಿನಲ್ಲಿ ಅನೇಕ ರೀತಿಯ ಕೆಲಸಗಳು ಜರುಗುತ್ತವೆ, ಬಸ್ಸಿಗೆ ಬೆಂಕಿ ಹಾಕುತ್ತಾರೆ, ರೈಲ್ವೆ ಟ್ರ್ಯಾಕ್ ನಡಿಲಸುತ್ತಾರೆ, ಕಲ್ಲು ಒಗೆಯುತ್ತಾರೆ ಯಾವ ಸರ್ಕಾರವೇ ಆಗಲಿ ಇದನ್ನು ಸಹನೆ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಮಹದೇವ ಜಿ. ಬಣಕಾರ್.—ಮಹಾರಾಷ್ಟ್ರದಲ್ಲಿ ಮಹಾಜನ್ ಕಮಿಷನ್ ರಿಪೋರ್ಟನ್ನು ಕಾರ್ಯಗತಮಾಡದಂತೆ, ಪಟಾನ್ಕರ್ ಫಾರ್ಮುಲಾ ಜಾರಿಗೆ ತರುವಂತೆ ಸರ್ಕಾರವೇ ಚಳುವಳಿಗಾರರಿಗೆ ಬೆಂಬಲ ನೀಡಿದಂತೆ ಮೈಸೂರು ಸರ್ಕಾರದವರೂ ಕೂಡ ಏಕೆ ಬೆಂಬಲ ನೀಡಬಾರದು ?

ಶ್ರೀ ವೀರೇಂದ್ರ ಪಾಟೀಲ್.—ಅದು ಮಾನ್ಯಸದಸ್ಯರ ಅಭಿಪ್ರಾಯದ ಪ್ರಶ್ನೆ. ಆದರೆ ಸರ್ಕಾರ ಈ ತರಹದ ಚಳುವಳಿಗಳಿಗೆ ಬೆಂಬಲ ನೀಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಂಜಂಗಿ ಮತ್ತು ನಾರಾಯಣಕುಮಾರ್ ಇವರ ಮೇಲೆ ಒಂದು ಸತ್ಯಕ್ಕೆ ದೂರವಾದ ಆಪಾದನೆ ಹೊರಿಸಿ ಕೇಸುಹಾಕಿವ್ದಾರೆ, ಅದೂ ಅಲ್ಲದೇ ಅವರಿಬ್ಬರನ್ನೂ ಕರೆದುಕೊಂಡು ಹೋಗಿ ಜಯನಗರದ ಪೋಲೀಸ್ ಸ್ಟೇಷನ್‌ನಲ್ಲಿ ಒಬ್ಬ ಇನ್‌ಸ್ಪೆಕ್ಟರು ಮತ್ತು ಕಾನ್‌ಸ್ಟೇಬಲ್ಲು ಸಿಕ್ಕಾಪಟ್ಟೆ ಹೊಡೆದರು ಅಂತ ಹೇಳಿ ಗೊತ್ತಾಗಿದೆ. ಹಾಗೇನಾದರೂ ಇದ್ದರೆ ಆ ಪೋಲೀಸ್‌ನವರ ಮೇಲೆ ಏನು ಕ್ರಮ ಕೈಕೊಂಡಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಉತ್ತರದಲ್ಲೇ ಹೇಳಿದ್ದೇನೆ. ಆ ರೀತಿ ದೂರು ಬಂದಿಲ್ಲ.

expenditure incurred by Chitradurga Municipal Council

331. Sri G. DUGGAPPA (Bharmasagara).—

Will the Minister of Stae for Municpal Administration be pleased to state :—

(*a*) whether it has come to the notice of Government that the Chitradurga Municipal Council did not conduct the monthly meetings for one year since April, 1968 ;

(*b*) whether the said Municipal Council did incur any expenditure during this period :

(*c*) if so, the total amount of expenditure incurred during the above period ;

(*d*) whether this expenditure has been approved by any appropriate anthority ;

(*e*) if so, who has approved the expenditure ;

(*f*) whether the Accountant General has raised any objections for the expenditure incurred ;

(*g*) if so, what they are ;

(*h*) the persons held responsible for the above expenditure ;

(*i*) whether Government intend to take any action even now to fix the responsibility for this expenditure which was incurred during the period when the Council did not hold monthly meetings ?

Sri B. M. PATIL (Minister of State for Municipal Administration).—

(*a*) The monthly meetings of Town Municipal Council, Chitradurga for the months of April 1968 to end of November 1968 have been held. No meetings were held from December 1968 to June 1969.

(*b*) Yes.

(*c*) Rs. 24,60,787.

(*d*) The expenditure amounting to Rs. 16,17,997 incurred from April 1968 to October 1968 was approved by Council in the adjourned monthly meetings.

(*e*) The Municipal Council. The expenditure from November, 1968 to end of June 1969 will have to be approved. The Deputy Commissioner is taking necessary action in this behalf.

(*f*) No.

(*g*) Does not arise in view of reply to clause (*f*).

(*h*) The President and the Council.

(*i*) Yes.

ಶ್ರೀ ಜಿ. ದುಗ್ಗಪ್ಪ.—ಚಿತ್ರದುರ್ಗ ನಗರಸಭೆಯವರು ಮಾಕ್ಸೇಯಾನ ಮಿಷಿಂಗುಗಳನ್ನು ನಡೆಸಲಿಲ್ಲ ಎಂಬುದಾಗಿ ಹೇಳಿದ್ದಾರೆ. 1969ನೇ ಫೆಬ್ರವರಿಯಲ್ಲಿ ಅನಂತರ ಪುನಃ ಏಪ್ರಿಲ್ ತಿಂಗಳಲ್ಲಿ 12 ಜನರು ಸೇರಿ ಸರ್ಕಾರಕ್ಕೆ ಒಂದು ದೂರನ್ನು ಕಳುಹಿಸಿದ್ದೆವು ಅದನ್ನು ಸರ್ಕಾರದವರ ಕಡೆಗೆ ಅಧ್ಯಕ್ಷರ ಮೂಲಕ ಕಳುಹಿಸಿಕೊಟ್ಟಿದ್ದೇವೆ. ಆ ಬಗ್ಗೆ ಏನಾದರೂ ವಿಚಾರಣೆ ನಡೆಸಿದ್ದಾರೆಯೇ ?

†ಶ್ರೀ ಬಿ. ಎಂ. ಪಾಟೀಲ್.—ಈಗಾಗಲೇ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಒಂದು ವರದಿಯನ್ನು ಈ ಬಗ್ಗೆ ಒಪ್ಪಿಸಿದ್ದಾರೆ. ಕೆಲವು ಕಡೆ ಅಡ್ಜೆರ್ನ್ಡ್ ಮಿಷಿಂಗುಗಳನ್ನು ನಡೆಸಿರ್ಲಾ ಎಂದು ಹೇಳಿದ್ದಾರೆ. ಅಂಥ ತಡೆ ಹಣವನ್ನು ಕೆಲವು ಅಕ್ರಮ ರೀತಿಯಲ್ಲಿ ಖರ್ಚುಮಾಡಿದ್ದಾರೆ. ಅದರ ಬಗ್ಗೆ ವಿವರವಾದ ವಿಚಾರಣೆಯನ್ನು ಕೈಗೊಳ್ಳಬೇಕೆಂದೂ ಮತ್ತು ಆ ವಿಚಾರಣೆ ನಡೆಸಿದ ನಂತರ ಸೂಕ್ತಕ್ರಮಗಳನ್ನು ಕೈಗೊಳ್ಳುವಂತೆ ಸರ್ಕಾರದವರು ಅಧಿಕಾರಿಗಳಿಗೆ ತಿಳಿಸಿದ್ದಾರೆ.

ಶ್ರೀ ಜಿ. ದುಗ್ಗಪ್ಪ.—(ಎ) ಪ್ರಶ್ನೆಗೆ ಉತ್ತರದಲ್ಲಿ ಚಿತ್ರದುರ್ಗ ಟೌನ್ ಮುನಿಸಿಪಲ್ ಸಭೆಯನ್ನು ಏಪ್ರಿಲ್ 1968ರಿಂದ ನವೆಂಬರ್ 1968ರ ಕೊನೆಯವರೆಗೂ ನಡೆಸಲಿಲ್ಲ ಎಂದು ಇಲ್ಲ ಹೇಳಿದೆ. ಆದರೆ ಸರ್ಕಾರದವರು ಹೊರಡಿಸಿರತಕ್ಕ ಆರ್ಡರ್ ನಂ. ಎಚ್.ಎಂ.ಎ. 7—ಟಿ.ಎಂ. 69 ತಾ. 27—5—69 ಈ ಆರ್ಡರಿನಲ್ಲಿ ಏಪ್ರಿಲ್ 1968ರಿಂದ ಒಂದು ವರ್ಷಕಾಲ ಪುರನಭೆಯನ್ನು ನಡೆಸಲಿಲ್ಲ ಎಂದು ಹೇಳಿದೆ. ಹೀಗೆ ಈಗ ಇಲ್ಲಿ ಕೊಟ್ಟಿರತಕ್ಕ ಉತ್ತರಕ್ಕೂ ಮತ್ತು ಆ ಸರ್ಕಾರಿ ಆಜ್ಞೆಯಲ್ಲಿ ಸೇರಿರತಕ್ಕ ವಿಷಯ ಎರಡಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಈ ಎರಡರಲ್ಲಿ ಯಾವುದು ಸರಿ ಎಂಬುದನ್ನು ತಿಳಿಸುವುದಕ್ಕಾಗುತ್ತದೆಯೇ ?

ಶ್ರೀ ಬಿ. ಎಂ. ಪಾಟೀಲ್.—ಡಿವಿಜನಲ್ ಕಮೀಷನರವರು ಕೆಲವು ಕಡೆ ಮಾಟಿಂಗುಗಳನ್ನು ನಡೆಸದೆ ಇದ್ದಕಾರಣ ಅಂಥ ಕಡೆ ಅವರು ಪ್ರೋಕಾಸ್ ನೋಟೀಸುಗಳನ್ನು ಕೊಟ್ಟಿರಬಹುದು. ಆದರೆ ಕೆಲವು ಕಡೆ ರೆಗ್ಯುಲರ್ ಮಾಟಿಂಗುಗಳಾಗಿಲ್ಲ. ಅಡ್ಜೆರನ್ಡ್ ಮಾಟಿಂಗುಗಳಾಗಿವೆ.

ಶ್ರೀ ಎಚ್. ಬಿ. ಹ್ಯಾಲನಯ್ಯ.—ಟೌನ್ ಮುನಿಸಿಪಲ್ ಆಕ್ಟ್ ಪ್ರಕಾರ ಅನ್ಯುಯಲ್ ಜನರಲ್ ಬಾಡಿ ಮೀಟಿಂಗ್ ಮತ್ತು ಮಾಸಿಕ ಸಭೆಗಳನ್ನು ಕಡ್ಡಾಯವಾಗಿ ಕರೆಯಬೇಕು. ಆ ಮೀಟಿಂಗ್ ನಲ್ಲಿ ಆಗುವಂಥ ನಡವಳಿಕೆಗಳನ್ನು ಪ್ರೊಸೀಡಿಂಗ್ಸನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಡಬೇಕೆಂಬ ಕಾನೂನು ಇರುವಾಗ ಸುಮಾರು 7 ತಿಂಗಳಿಂದಲೂ ಅವರು ಈ ಮಾಸಿಕ ಸಭೆಯನ್ನು ನಡೆಯಿಸದೇ ಇರುವುದರಿಂದ ಅವರ ಮೇಲೆ ಜಿಲ್ಲಾಧಿಕಾರಿಗಳು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ?

ಶ್ರೀ ಬಿ. ಎಂ. ಪಾಟೀಲ್.—ಜಿಲ್ಲಾಧಿಕಾರಿಗಳ ವರದಿ ಮೇಲೆ ಸರ್ಕಾರ ಸೂಪರ್‌ಸೀಡ್ ಮಾಡಿದೆ. ಈ ಕ್ರಮ ತೆಗೆದುಕೊಂಡಿದೆ.

Sri H. SIDDAVEERAPPA.—What is the name of the Municipal President concerned and to which party he belongs ?

Sri B. M. PATIL.—I do not know, Sir. That information is not with me.

ಶ್ರೀ ಕೆ. ಪ್ರಭಾಕರ್.—ಇದರಲ್ಲಿ ಮಂತ್ರಿಗಳು ಉತ್ತರ ಹೇಳುತ್ತ ಪೋಸ್ಟ್‌ಪೋನ್ಡ್ ಮೀಟಿಂಗ್ ಆಗಿದೆ ಎಂದು ಹೇಳಿದ್ದಾರೆ. ಒಂದೇ ಮೀಟಿಂಗ್ ಎಷ್ಟು ಸಾರಿ ಪೋಸ್ಟ್‌ಪೋನ್ಡ್ ಆಗಿದೆ ?

ಶ್ರೀ ಬಿ. ಎಂ. ಪಾಟೀಲ್.—ಒಂದೇ ಮೀಟಿಂಗ್ ಬಹಳ ಸಾರಿ ಪೋಸ್ಟ್‌ಪೋನ್ ಆಗಿಲ್ಲ. ಆ ಮೀಟಿಂಗ್ ಅನಿವಾರ್ಯವಾಗಿ ಪೋಸ್ಟ್‌ಪೋನ್ ಮಾಡಿದ್ದಾರೆ. ಅಂತಹ ಪ್ರಸಂಗ ಬಂದಿದೆ. ಮತ್ತೆ ಮೀಟಿಂಗ್ ಕರೆದಿದ್ದಾರೆ. ಕಾರ್ಯಕಲಾಪಗಳು ನಡೆದಿವೆ.

ಶ್ರೀ ಜಿ. ದುಗ್ಗಪ್ಪ.—ಆ ನಗರಸಭೆಯ ಅಧ್ಯಕ್ಷರು ಸಭೆಯ ಮೀಟಿಂಗನ್ನು ಕರೆಯುವುದಿಲ್ಲ. 1964ನೇ ಮುನಿಸಿಪಲ್ ಆಕ್ಟ್ 47ನೇ ಸೆಕ್ಷನ್ ಪ್ರಕಾರ ಕಡ್ಡಾಯವಾಗಿ ಮೀಟಿಂಗ್ ಕರೆಯಬೇಕು. ಈ ವಿಚಾರದ ಬಗ್ಗೆ ಡೆಪ್ಯುಟಿ ಕಮಿಷನರ್‌ಗೆ ಹೇಳಿದರೂ ಕ್ರಮ ತೆಗೆದುಕೊಳ್ಳಲಿಲ್ಲ. ಡಿವಿಷನಲ್ ಕಮಿಷನರಿಗೆ ಹೇಳಿದರೂ ಕ್ರಮ ತೆಗೆದುಕೊಳ್ಳಲಿಲ್ಲ. ಮಾನ್ಯ ಸ್ಪೀಕರಿತರಾದ ಹುಕಾಸಿನ ಮಂತ್ರಿಗಳಿಗೆ ಹೇಳಿದರೂ ಕ್ರಮ ತೆಗೆದುಕೊಳ್ಳಲಿಲ್ಲ. ಆದ್ದರಿಂದ ಈಗಲಾದರೂ ಮಾನ್ಯಮಂತ್ರಿಗಳು ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳಿದ್ದಕ್ಕೆ ಮಂತ್ರಿಗಳು ಅದನ್ನು ಸೂಪರ್‌ಸೀಡ್ ಮಾಡಲಾಗಿದೆಯೆಂಬುದಾಗಿ ಹೇಳಿದ್ದಾರೆ. ಅಂದಮೇಲೆ ಅಲ್ಲಿ ಆಗಿರುವ ಖರ್ಚುಗಳ ಬಗ್ಗೆ ಅದನ್ನು ವಸೂಲು ಮಾಡಲು ಸಾಧ್ಯವಾದಷ್ಟು ಕ್ರಮಗಳನ್ನು ತೆಗೆದುಕೊಂಡಿದ್ದೀರಾ ?

ಶ್ರೀ ಬಿ. ಎಂ. ಪಾಟೀರ್.—ಸಾಧ್ಯವಾದಷ್ಟು ಮಾಡಿದ್ದೇವೆ. ಅಲ್ಲಂದ ಪ್ರತಿನಿಧಿಸಿರತಕ್ಕ ಮಾನ್ಯ ಸದಸ್ಯರು ಹೇಳಿದ ಪ್ರಕಾರ ಕ್ರಮ ತೆಗೆದುಕೊಂಡಿದೆ.

Selling rate of Jaggery prevailing in Bidar District

341. Sri V. N. PATIL (Humnabad).—

Will the Minister of State for Food and Civil Supplies be pleased to state :—

(*a*) the selling rate of jaggery in Bidar District prevailing now and during the months of January to the end of June, 1969 ;

(*b*) the selling rate of jaggery during the corresponding months in the years 1967 and 1968 ;

(*c*) the reasons for the fall of the selling rate of jaggery ;

(*d*) the steps taken to support the price line to fetch a remunerative price to the agriculturists ?